ನಗರಸಭೆಗಳಿಗೆ ಹೊಸ ಬಡಾವಣೆಗಳನ್ನು ಸೇರಿಸುವ ಕುರಿತು.

297(239)

ಶ್ರೀ ನಾರಾಯಣಸ್ವಾಮಿ.ಎ.(ಆನೇಕಲ್): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಜಿಲ್ಲೆಯ ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ನಗರಸಭೆಗಳು ಇರುವುದು ಎಷ್ಟು; ಅವು ಯಾವುವು?

ಆ) ಈ ನಗರಸಭೆಗಳ ರಚನೆಯ ನಂತರ ನಗರ ಸಭೆಗಳಿಗೆ ಹೊಸ ಬಡಾವಣೆಗಳನ್ನು ಸೇರಿಸಲು ಸರ್ಕಾರಕ್ಕೆ ಮನವಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ ಸದರಿ ನಗರಸಭೆಗಳಿಗೆ ಹೊಸ ಬಡಾವಣೆ ಸೇರಿಸಲು ಅಥವಾ ನಗರಸಭೆ ರಚಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ೭ ನಗರಸಭೆಗಳು ಇರುತ್ತವೆ. ಅವುಗಳು

೧) ಮಹಾದೇವಪುರ

೨) ಕೃಷ್ಣರಾಜಪುರ

೩) ಬ್ಯಾಟರಾಯನಪುರ

೪) ಬೊಮ್ಮನಹಳ್ಳಿ

೫) ಪಟ್ಟಣಗೆರೆ

೬) ದಾಸರಹಳ್ಳಿ

೭) ಯಲಹಂಕ

ಆ) ಬಂದಿದೆ.

ಇ) ನಗರಸಭೆಗಳ ಗಡಿ ವಿಸ್ತರಣೆ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಬರುವ ಪ್ರಸ್ತಾವನೆಗಳನ್ನು ಪ್ರಸ್ತುತ ಜನಗಣತಿ ನಿರ್ದೇಶನಾಲಯದ ನಿರ್ಬಂಧ ಇರುವ ಕಾರಣ

ದಿನಾಂಕ: ೩೧-೩-೨೦೦೧ರ ನಂತರ ಪರಿಶೀಲಿಸಲಾಗುವುದು.

ಮೊರಾರ್ಜಿದೇಸಾಯಿ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸುವ ಕುರಿತು.

298(241)

ಶ್ರೀ ಎ. ನಾರಾಯಣ ಸ್ವಾಮಿ(ಆನೇಕಲ್): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಮೊರಾರ್ಜಿದೇಸಾಯಿ ವಸತಿ ಶಾಲೆಗಳನ್ನು ಸ್ಥಾಪಿಸಿರುವ ತಾಲ್ಲೂಕು ಕೇಂದ್ರಗಳು ಯಾವುವು?

2) ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸಲಾಗಿದೆಯೇ? ಸ್ವಂತ ಕಟ್ಟಡಗಳನ್ನು ಒದಗಿಸದೇ ಇದ್ದ ಪಕ್ಷದಲ್ಲಿ ಅಂತಹ ಶಾಲೆಗಳ ವಿವರಗಳನ್ನು ನೀಡುವುದು?

3) ಸದರಿ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

1) ರಾಜ್ಯದ ಕೆಳಕಂಡ ತಾಲ್ಲೂಕು ಕೇಂದ್ರಗಳಲ್ಲಿ ಮೊರಾರ್ಜಿ ದೇಸಾಯಿ : ನವೋದಯ ಮಾದರಿ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ.

1) ಮುಧೋಳ್

2) ಚೆನ್ನಪಟ್ಟಣ

3) ಬೈಲಹೊಂಗಲ

4) ಬಳ್ಳಾರಿ

5) ಕೊಪ್ಪ

6) ಜೇವರ್ಗಿ

7) ಶಹಾಪುರ